ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

ಸಿ. ಸಿ. ನಂ.**673/2023**

| | | | |
|---|---|---|---|
| ಸಾಕ್ಷಿಧಾರರ ಹೆಸರು | : ಕೃಷ್ಣ ಡೊಳ್ಳೆಶ್ವರ | ಪಿಡಬ್ಲ್ಯೂ | **1** |
| ತಂದೆ:ಗಂಡನ ಹೆಸರು | : ಗದಿಗೆಪ್ಪ | ಸಿಡಬ್ಲ್ಯೂ | **4** |
| ವಯಸ್ಸು | : 35 ವರ್ಷ | | |
| ಉದ್ಯೋಗ | : ವ್ಯವಸಾಯ | | |
| ವಾಸಸ್ಥಳ | : ಯಳವಟ್ಟಿ | | |

ದಿನಾಂಕ **26.03.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-5 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ ಅವರು ನಮ್ಮ ಊರಿನವರು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಗೆ ಟ್ರ್ಯಾಕ್ಟರ ಇಂಜಿನ್ ಮತ್ತು ಟ್ರೈಲರ್ ಜಪ್ತಿ ಪಂಚನಾಮೆಯಲ್ಲಿರುವ ಸಹಿ ಗುರುತಿಸಿದ್ದು ಅದನ್ನುನಿ ಪಿ 1 ಎಂದು ಸಾಕ್ಷಿಯ ಸಹಿಯನ್ನು ನಿ ಪಿ1(ಎ) ಎಂದು ಗುರುತಿಸಲಾಯಿತು. ಫೋಟೋವನ್ನು ಹಾನಗಲ್ ಪೋಲಿಸ್ ಠಾಣೆಯಲ್ಲಿ ತೆಗೆದಿರುತ್ತಾರೆ. ಫೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು**)**

**:** ಪಾಟೀ ಸವಾಲು **:** ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ 16.11.2022 ರಂದು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಆರೋಪಿ ತೋರಿಸಿ ಹಾಜರುಪಡಿಸಿದ ಟ್ರ್ಯಾಕ್ಟರ ಇಂಜಿನ್ ಮತ್ತು ಟ್ರೈಲರನ್ನು ಜಪ್ತಿಪಡಿಸಿಕೊಂಡು ಪೋಲಿಸರು 1.00 ರಿಂದ 2.00 ರವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ ನಂ. ಕೆಎ 27 ಟಿ ಸಿ 4054 ಇದ್ದು ಮತ್ತು ಚೆಸ್ಸಿ ನಂ. 958513063386 ಮತ್ತು ಇಂಜಿನ್ ನಂ. S32K5250 ಅಂತಾ ಇದ್ದು ಮತ್ತು ಜಂಗು ಹಿಡಿದ ಗ್ರಿನ್ ಮತ್ತು ಯಲ್ಲೊ ಕಲರಿನ

ಟ್ರೈಲರ ನಂ. ಕೆ ಎ 27 ಟಿ ಎ -6004 ಜಪ್ತಿಪಡಿಸಿಕೊಂಡರು ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಹಾಜರು ಇದ್ದು ನಾನು ಇಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್ ಪಿ ಎ ವಕೀಲರಿಂದಃ

(ಆರೋಪಿ ಪರ ವಕೀಲರು ಈ ಸಾಕ್ಷಿಧಾರರ ಪಾಟೀ ಸವಾಲು ಏನೂ ಇಲ್ಲ ಅಂತಾ ನಿವೇದಿಸಿಕೊಂಡಿರುತ್ತಾರೆ )

: ಮರುವಿಚಾರಣೆ : ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್